ಒ.ಎಸ್. ನಂ.112/2016
ಡಿಡಬ್ಲು-2

ದಿನಾಂಕ 28.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟಿ ಸವಾಲುಃ ವಾದಿ ಪರ ವಕೀಲರಿಂದಃ</u>

ನಾನು ಭೀಮರಾಯನ ಗುಡಿ ನೀರಾವರಿ ಇಲಾಖೆಯಲ್ಲಿ ನಾನು ದ್ವಿ ದ ಸ ಆಗಿ 35-ವರ್ಷಗಳವರೆಗೆ ಕರ್ತವ್ಯ ಮಾಡಿರುತ್ತೇನೆ. ಆ ಸಮಯದಲ್ಲಿ ನಾನು ನನ್ನ ಕುಟುಂಬದೊಂದಿಗೆ ವಾಸವಾಗಿದ್ದೆ. ದಾವಾ ಸ್ವತ್ತುಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನನ್ನು ಪ್ರತಿವಾದಿ ಪರ ವಕೀಲರು ಕರೆಸಿರುತ್ತಾರೆ. ವಾದಿಯ ವಯಸ್ಸು ನನಗೆ ಗೊತ್ತಿಲ್ಲ. ದೇವಣ್ಣರವರ ತಂದೆಯಾದ ಹಣಮಂತರಾಯನ ವಯಸ್ಸು ಅಂದಾಜು 75-ವರ್ಷಗಳು ಇರಬಹುದು. ಸದರಿ ಹಣಮಂತರಾಯರವರು ಈಗ ಮೃತರಾಗಿರುತ್ತಾರೆ. ನಾಗಪ್ಪನ ತಂದೆಯಾದ ತೇಜಪ್ಪ ಎಂದರೆ ಸರಿ. ಸದರಿ ತೇಜಪ್ಪರವರು ಮೃತಪಟ್ಟಿರುತ್ತಾರೆ. ತೇಜಪ್ಪನ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ತೇಜಪ್ಪನ ತಾಯಿಯ ಲಚಮವ್ವ. ಲಚಮವ್ವರವರು ಮೃತರಾಗಿರುತ್ತಾರೆ. ನನ್ನ ಸಾಕ್ಷಿ ಪ್ರಮಾಣದಲ್ಲಿನ ವಿಷಯಗಳನ್ನು ನಾನು ವಕೀಲರಿಗೆ ಹೇಳಿ ಬರೆಸಿರುತ್ತೇನೆ. ತೇಜಪ್ಪನ ತಂದೆಯ ಹೆಸರು ಬಸಲಿಂಗಪ್ಪ ಎಂದರೆ ಸರಿ. ಅವರು ಮೃತಪಟ್ಟು ಅಂದಾಜು 20-ವರ್ಷಗಳಾಗಿರಬಹುದು. ಬಲಿಂಗಪ್ಪನ ತಂದೆ ನಾಗಪ್ಪ ಎಂದರೆ ನನಗೆ ಗೊತ್ತಿಲ್ಲ ಮತ್ತು ಅವರ ಸಹೋದರ ಭೀಮಪ್ಪ ನನಗೆ ಗೊತ್ತಿಲ್ಲ. ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ

ಓ.ಎಸ್. ನಂ.112/2016
ಡಿಡಬ್ಲು-3

ದಿನಾಂಕ 28.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ವಾದಿ ಪರ ವಕೀಲರಿಂದಃ

ನಾನು ಅಂಬರಖೇಡ ಗ್ರಾಮದ ನಿವಾಸಿ ಎಂದರೆ ಸರಿ. ದೇವಣ್ಣ, ನಾಗಪ್ಪ, ಮಲ್ಲಪ್ಪರವರು ಮಲ್ಲಾಬಾದ ಗ್ರಾಮದಲ್ಲಿರುತ್ತಾರೆ ಎಂದರೆ ಸರಿ. ನಾಗಪ್ಪನ, ಆತನ ಹೆಂಡತಿಯ ಮತ್ತು ಆತನ ಮಕ್ಕಳ ಹೆಸರಿನಲ್ಲಿ ಎಷ್ಟು ಜಮೀನುಗಳಿವೆ ಎಂದರೆ ಸಾಕ್ಷಿ 50-ಎಕರೆ ಇರಬಹುದು ಆದರೆ ನನಗೆ ನಿಖರವಾಗಿ ಮಾಹಿತಿಯಿಲ್ಲ. ದೇವಣ್ಣ ತಂದೆ ಹಣಮಂತರಾಯನ ಹೆಸರಿನಲ್ಲಿ ಎಷ್ಟು ಜಮೀನುಗಳಿವೆ ಎಂದರೆ ಸಾಕ್ಷಿ ಆತನ ಹೆಸರಿನಲ್ಲಿ ಯಾವುದೆ ಜಮೀನುಗಳಿಲ್ಲ ಎಂದು ಹೇಳುತ್ತಾರೆ. ದೇವಣ್ಣ ತಂದೆ ಹಣಮಂತರಾಯನ ಹೆಸರಿನಲ್ಲಿ ಸರ್ವೆ ನಂ.134/2 ಒಟ್ಟು 10-ಎಕರೆ 35-ಗುಂಟೆ ಜಮೀನು ಮಲ್ಲಾಬಾದ ಗ್ರಾಮದಲ್ಲಿದೆ ಎಂದರೆ ಸರಿಯಲ್ಲ. ದೇವೆಂದ್ರರವರ ಹೆಸರಿನಲ್ಲಿ ಸರ್ವೆ ನಂ.134/1 ಒಟ್ಟು 10-ಎಕರೆ 35-ಗುಟೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.88 ಜಮೀನು ಯಾರ ಹೆಸರಿನಲ್ಲಿವೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.112 ಜಮೀನು ಯಾರ ಹೆಸರಿನಲ್ಲಿವೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ದೇವಣ್ಣರವರು ನಾಗಣ್ಣರವರ ಮೇಲೆ ಪಾಲು ಕೇಳಿ ದಾವೆಯನ್ನು ಸಲ್ಲಿರುತ್ತಾರೆ. ನಾಗಣ್ಣರವರು ದೇವಣ್ಣರವರಿಗೆ ಪಾಲು ಕೊಟ್ಟಿದ್ದಾರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಡಿ-3 ರ ಪಹಣಿಯಲ್ಲಿ ಹಣಮಂತರಾಯ ತಂದೆ ಬಸಲಿಂಗಪ್ಪರವರು ಸಾಗುವಳಿಯಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿಗಳಲ್ಲಿ ಯಾರು ಯಾರು ಮಾಲಿಕರು ಇರುತ್ತಾರೆ ಎಂದರೆ ಸಾಕ್ಷಿ ನಾಗಣ್ಣರವರು ಸಾಗುವಳಿ ಮಾಡುತ್ತಾರೆ ಎಂದು ಹೇಳುತ್ತಾರೆ. ಸರ್ವೆ ನಂ.112/ಆ ಒಟ್ಟು 16-ಎಕರೆ 02-ಗುಂಟೆ ಜಮೀನು ಬಸಲಿಂಗಪ್ಪ ತಂದೆ ನಾಗಪ್ಪರವರು ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನು ಸಾಕ್ಷಿ ಪ್ರಮಾಣ ಪತ್ರವನ್ನು ನಾನೆ ಹೇಳಿ ಬರೆಸಿರುತ್ತೇನೆ. ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ